


'ಕಲೊನಿಯಲ್ ಟೈಮ್ಸ್' ಪತ್ರಿಕೆಯ ಕಚೇರಿ

ಆರಂಭವಾಯಿತು. ಅಪ್ಪ ಫೋಟೊಗಳ ಪ್ರಿಂಟಿಂಗ್ ಬ್ಲಾಕ್ ಮಾಡುವುದಕ್ಕೆ ಆರಂಭಿಸಿದರು. ನನ್ನ ಅಣ್ಣ-ಅಕ್ಕಂದಿರು ಇದೇ ಕ್ಷೇತ್ರದಲ್ಲಿ ತೊಡಗಿಕೊಂಡರು. ನನಗೆ ನೈರೋಬಿಯ ರಿವರ್‌ರೋಡ್‌ನಲ್ಲಿ ಹೊಸ ಕೆಲಸ ಸಿಕ್ಕಿತು. ನದಿಯ ಪಕ್ಕದಲ್ಲೇ ಇರುವ ಉದ್ದನೆಯ ರೋಡಿದು. ಇದರ ತುಂಬಾ ಭಾರತೀಯ ಮೂಲದವರ ಬಟ್ಟೆ-ಚಪ್ಪಲಿ-ಕಿರಾಣಿ ಅಂಗಡಿಗಳಿವೆ. ಅಲ್ಲೊಂದು ಪಟೇಲ್ ಎಂಬುವವರ ಸ್ಟುಡಿಯೊ ಇತ್ತು. ಆತ ಆದಾಯ ತೆರಿಗೆ ಇಲಾಖೆಯಲ್ಲಿ ನೌಕರಿ ಮಾಡುತ್ತಿದ್ದ. ಸಂಜೆ ಸ್ಟುಡಿಯೊ ತೆರೆಯುತ್ತಿದ್ದ. ನನ್ನ ಕೆಲಸವೆಂದರೆ, ರಸ್ತೆಯಲ್ಲಿ ನಿಂತು ಹಾದಿಹೋಕರಿಗೆ 'ಬನ್ನಿ ಬನ್ನಿ, ಫೋಟೊ ತೆಗೆಸಿಕೊಳ್ಳಿ' ಎಂದು ಕರೆಯುವುದು; ತೆಗೆದ ಪಟಗಳಿಗೆ ಪೆನ್ಸಿಲ್‌ನಲ್ಲಿ ಟಚ್ ಮಾಡಿ ಪ್ರಖರತೆ ತರುವುದು. ನಮ್ಮಲ್ಲಿರುವಂತೆ ಆಫ್ರಿಕನ್ನರೂ ಬೆಳ್ಳಗೆ ಕಾಣಲು ಯತ್ನಿಸುತ್ತಿದ್ದರು. ಮೂರು ವರ್ಷ ಕೆಲಸ ಮಾಡಿದೆ. ಮಜಾ ಸಿಗಲಿಲ್ಲ.

**◆ ಫೋಟೊಗ್ರಫಿ ಅಧ್ಯಯನ ಎಲ್ಲಿ ಮಾಡಿದಿರಿ?**

ಇಂಗ್ಲೆಂಡಿನಲ್ಲಿ. ನಾನು ಓದಬಯಸಿದ್ದೆ. ಆದರೆ ಹಣವಿರಲಿಲ್ಲ. ಅಪ್ಪನಿಗೆ ಏಳು ಮಕ್ಕಳು. ಪ್ರೆಸ್ ಬಂದಾಗಿತ್ತು. ವಿದ್ಯಾಮಂತ್ರಿ ಡಾ. ಕಿಯಾನೊ ಅಪ್ಪನಿಗೆ ಪರಿಚಿತರು. ಅವರು ನಾನು ರಸ್ತೆಯಲ್ಲಿ ಬೇಕಾರ್ ಅಲೆಯುತ್ತಿರುವಾಗ ಸ್ವಾಹಿಲಿಯಲ್ಲಿ 'ಮಗನೇ ಹೇಗಿದ್ದೀಯಾ?' ಎನ್ನುತ್ತಿದ್ದರು. ಅವರಿಗೆ ಗೊತ್ತಿತ್ತು, ಗಿರಿಧರಿ ಲಾಲ್ ವಿದ್ಯಾರ್ಥಿಯ ಮಗ ಇವನು ಎಂದು. ಒಮ್ಮೆ ಕಿಯಾನೊ ಅವರ ಕಚೇರಿಗೆ ಹೋದೆ. 'ಇಂಗ್ಲೆಂಡಿಗೆ ಓದಲು ಹೋಗಬೇಕು. ಐವತ್ತು ಸಾವಿರ ಸಾಲ ಕೊಡಿ' ಎಂದೆ. ಅವರು ಬಿಳಿಯ ಹಾಳೆಯನ್ನು ಕೊಟ್ಟು 'ಅರ್ಜಿ ಬರೆದುಕೊಡು' ಎಂದರು. ಸಾಲ ಮಂಜೂರಾಯಿತು. ಲಂಡನ್ನಿನ ಡಾರ್ಬಿ ಕಾಲೇಜ್ ಆಫ್ ಆರ್ಟ್‌ಗೆ ಹೋಗಿ ಫೋಟೊಗ್ರಫಿ ಕೋರ್ಸಿಗೆ ಸೇರಿಕೊಂಡೆ. ಎರಡು ವರ್ಷ ಕಲಿತೆ. ಅಮೆರಿಕೆಯ